# ಪಿ.ಎ.ಎಂ. ಸರ್ಕಾರಿ ಪ್ರೌಢಶಾಲೆ ಬನ್ನಿಕಲ್ಲು, ಹ ಬೊ ಹಳ್ಳಿ(ತಾ), ಬಳ್ಳಾರಿ(ಜಿ)

ವಿಷಯ:- ಸಮಾಜ ವಿಜ್ಞಾನ ಅರ್ಧ ವಾರ್ಷಿಕ ಪರೀಕ್ಷೆ ಅಂಕ:-40

ತರಗತಿ:- 9ನೇ ತರಗತಿ ಸಮಯ:-90ನಿ

**I. ಈ ಕೆಳಗಿನ ಬಹುಆಯ್ಕೆ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:** 6X1=6

1. ಈ ಕೆಳಗಿನವುಗಳಲ್ಲಿ ಯಾವುದು ಮುಗಿದು ಹೋಗದ ಸಂಪನ್ಮೂಲಕ್ಕೆ ಉದಾಹರಣೆಯಾಗಿದೆ.
   ಎ) ಕಲ್ಲಿದ್ದಲ್ಲು ಬಿ) ಪೆಟ್ರೋಲಿಯಂ ಸಿ) ಕಬ್ಬಿಣದ ಅದಿರು ಡಿ) ಸೌರಶಕ್ತಿ
2. ಮಗುವು ಪ್ರೀತಿ, ವಿಶ್ವಾಸ, ಸಹಕಾರ ಮೊದಲಾದ ಜೀವನ ಮೌಲ್ಯಗಳನ್ನು ಮೊದಲು ಕಲಿಯುವುದು
   ಎ) ಕುಟುಂಬದಲ್ಲಿ ಬಿ) ಸಮವಸ್ಕರ ಗುಂಪಿನಲ್ಲಿ ಸಿ) ಧರ್ಮದಲ್ಲಿ ಡಿ) ನೆರೆಹೊರೆಯಲ್ಲಿ
3. ಕ್ರೈಸ್ತ ಧರ್ಮದ ಪವಿತ್ರ ಗ್ರಂಥ
   ಎ) ಬೈಬಲ್ ಬಿ) ಕುರಾನ್ ಸಿ) ತ್ರಿಪಿಟಕಗಳು ಡಿ) ಅಂಗಗಳು
4. ಭಾರತದ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದವರು
   ಎ) ಬಾಬು ರಾಜೇಂದ್ರ ಪ್ರಸಾದ್ ಬಿ) ಅಂಬೇಡ್ಕರ್ ಸಿ) ಜವಹರ್ ಲಾಲ್ ನೆಹರು ಡಿ) ಗಾಂಧೀಜಿ
5. ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ನಿಗಧಿತ ವಯೋಮಿತಿ
   ಎ) 25ವರ್ಷ ಬಿ) 30ವರ್ಷ ಸಿ) 35ವರ್ಷ ಡಿ) 40ವರ್ಷ
6. ಕರ್ನಾಟಕದಲ್ಲಿ ಅತಿ ಕಡಿಮೆ ಮಳೆ ಬೀಳುವ ಅವಧಿ
   ಎ) ಬೇಸಿಗೆ ಕಾಲ ಬಿ) ಮಳೆಗಾಲ ಸಿ) ಮಾನ್ಸೂನ್ ಮಾರುತಗಳ ನಿರ್ಗಮನ ಕಾಲ ಡಿ) ಚಳಿಗಾಲ

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ:** 7X1=7

7. ಕುಟುಂಬದಲ್ಲಿ ವಾಸಿಸುವ ತಲೆಮಾರು/ಪಿಳಿಗೆಯ ಆಧಾರದ ಮೇಲೆ ನಿಮ್ಮ ಕುಟುಂಬದ ಪ್ರಕಾರವನ್ನು ತಿಳಿಸಿ.
8. ಕರ್ನಾಟಕವನ್ನು 'ಶ್ರೀಗಂಧದ ನಾಡು' ಎಂದು ಕರೆಯುತ್ತಾರೆ. ಏಕೆ?
9. ಪ್ರಸ್ತುತ ಭಾರತದ ರಾಷ್ಟ್ರಪತಿಯನ್ನು ಹೆಸರಿಸಿ.
10. ಸಾಮಾಜೀಕರಣ ಎಂದರೇನು?
11. ಜೀವ ಪರಿಸರದ ಹೆಜ್ಜೆ ಗುರುತನ್ನು ಅರ್ಥೈಸಿರಿ.
12. ಪಶ್ಚಿಮ ಘಟ್ಟಗಳನ್ನು ಕರ್ನಾಟಕದಲ್ಲಿ ಏನೆಂದು ಕರೆಯುವರು?
13. ಏಸು ಕ್ರಿಸ್ತ ಹುಟ್ಟಿದ ಸ್ಥಳವನ್ನು ಹೆಸರಿಸಿ. ಅಥವಾ ಶಂಕರಾಚಾರ್ಯರು ಎಲ್ಲಿ ಜನಿಸಿದರು?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:** 6X2=12

14. ಬಸವೇಶ್ವರರ 'ಕಾಯಕ ತತ್ವ'ದ ಬಗ್ಗೆ ಚರ್ಚಿಸಿ.
15. ಅವಿಭಕ್ತ ಕುಟುಂಬದ ಲಕ್ಷಣಗಳನ್ನು ವಿವರಿಸಿ.
16. ಜನಸಂಖ್ಯೆಯ ಗುಣಮಟ್ಟವನ್ನು ಹೆಚ್ಚಿಸಲು ಕೈಗೊಳ್ಳಬಹುದಾದ ಕ್ರಮಗಳನ್ನು ತಿಳಿಸಿ.
17. ನದಿಗಳು ರಾಜ್ಯಗಳ ನಡುವೆ ಹೇಗೆ ಸಾಮರಸ್ಯ ಬೆಳೆಸುತ್ತವೆ?
18. ಕರ್ನಾಟಕದ ಆಡಳಿತ ವಿಭಾಗಗಳನ್ನು ಹೆಸರಿಸಿ.
19. ರಾಜ್ಯ ವಿಧಾನ ಪರಿಷತ್ ಸದಸ್ಯರು ಯಾವ ಯಾವ ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ ವಿವರಿಸಿ.

**IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿರಿ:** 3X3=9

20. ರಜಪೂತ ಅರಸರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ವಿವರಿಸಿ. ಅಥವಾ ಭಾರತ ಸಂವಿಧಾನದ ಲಕ್ಷಣಗಳನ್ನು ವಿವರಿಸಿ.
21. ವ್ಯಕ್ತಿಯ ಜೀವನದಲ್ಲಿ ಸಾಮಾಜೀಕರಣವು ಅತ್ಯಂತ ಮಹತ್ವದ್ದು ಏಕೆ? ಅಥವಾ ಕರ್ನಾಟಕದ ಆರ್ಥಿಕಾಭಿವೃದ್ಧಿಯಲ್ಲಿ ವ್ಯವಸಾಯದ ಪಾತ್ರ ಅತ್ಯಂತ ಮಹತ್ವದ್ದು ಏಕೆ?
22. ಸಂಪನ್ಮೂಲಗಳ ಕೊರತೆಯು ಅಧಿಕವಾಗುತ್ತಿರುವುದಕ್ಕೆ ಕಾರಣವಾಗಿರುವ ಅಂಶಗಳು ಯಾವುವು? ಅಥವಾ ವ್ಯವಹಾರ ನಿರ್ವಹಣೆಯ ತತ್ವಗಳು ಯಾವುವು?

**V. ಈ ಕೆಳಗಿನ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:** 4X1=4

23. ವಿಜಯನಗರ ಕಾಲದ ಕಲೆ ಮತ್ತು ವಾಸ್ತುಶಿಲ್ಪವನ್ನು ವಿವರಿಸಿ.

**VI.** 24. ಕರ್ನಾಟಕದ ನಕ್ಷೆಯನ್ನು ರಚಿಸಿ ಇವುಗಳನ್ನು ಗುರುತಿಸಿ. ಎ) ಕರಾವಳಿ ಮೈದಾನ ಬಿ) ಮೈದಾನ ಪ್ರದೇಶ 1+1=2

# ಪಿ.ಎ.ಎಂ ಸರ್ಕಾರಿ ಪ್ರೌಢಶಾಲೆ ಬನ್ನಿಕಲ್ಲು, ಹ ಬೊ ಹಳ್ಳಿ(ತಾ), ಬಳ್ಳಾರಿ(ಜಿ)

ಸಂಕಲನಾತ್ಮಕ ಮೌಲ್ಯಮಾಪನ–1

ಅರ್ಧ ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ನೀಲನಕ್ಷೆ

**ತರಗತಿ: 9ನೇ ತರಗತಿ** **ವಿಷಯ: ಸಮಾಜ ವಿಜ್ಞಾನ**

**ಸಾಮರ್ಥ್ಯವಾರು ಅಂಕ ಹಂಚಿಕೆ**

| | ಸಾಮರ್ಥ್ಯ | ಅಂಕ | ಶೇಕಡವಾರು |
|---|---|---|---|
| 01 | ಜ್ಞಾನ | 12 | 30% |
| 02 | ತಿಳುವಳಿಕೆ | 16 | 40% |
| 03 | ಅನ್ವಯ | 10 | 25% |
| 04 | ಕೌಶಲ | 02 | 5% |

**ಕ್ಲಿಷ್ಟಾನುಸಾರ ಅಂಕ ಹಂಚಿಕೆ**

| | | ಅಂಕಗಳು | ಶೇಕಡವಾರು |
|---|---|---|---|
| 01 | ಸುಲಭ | 06 | 30% |
| 02 | ಸಾಮಾನ್ಯ | 09 | 45% |
| 03 | ಕಠಿಣ | 05 | 25% |

**ಪ್ರಶ್ನಾನುಸಾರ ಅಂಕ ಹಂಚಿಕೆ**

| | ಪ್ರಶ್ನೆಗಳು | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 01 | ಬಹುಆಯ್ಕೆ ಪ್ರಶ್ನೆಗಳು | 06 | 06 |
| 02 | ಕಿರು ಉತ್ತರದ ಪ್ರಶ್ನೆಗಳು | 07 | 07 |
| 03 | ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು | 06 | 12 |
| 04 | ದೀರ್ಘ ಉತ್ತರದ ಪ್ರಶ್ನೆಗಳು–1 | 03 | 09 |
| 05 | ದೀರ್ಘ ಉತ್ತರದ ಪ್ರಶ್ನೆಗಳು–2 | 01 | 04 |
| 06 | ನಕ್ಷೆ | 01 | 02 |
| | ಒಟ್ಟು | 24 | 40 |

**ವಿಷಯಾನುಸಾರ ಅಂಕ ಹಂಚಿಕೆ**

| | ಪ್ರಶ್ನೆಗಳ ಮಾದರಿಗಳು | ಬ.ಪ್ರ | ಕಿ.ಉ.ಪ್ರ | ಸ.ಉ.ಪ್ರ | ದೀ.ಉ.ಪ್ರ1 | ದೀ.ಉ.ಪ್ರ2 | ನಕ್ಷೆ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|---|---|
| 01 | ಇತಿಹಾಸ | 01 | 01 | 01 | 01 | 01 | --- | 05 | 11 |
| 02 | ರಾಜ್ಯಶಾಸ್ತ್ರ | 02 | 01 | 01 | --- | --- | --- | 04 | 05 |
| 03 | ಸಮಾಜಶಾಸ್ತ್ರ | 01 | 02 | 01 | --- | --- | --- | 04 | 05 |
| 04 | ಭೂಗೋಳಶಾಸ್ತ್ರ | 01 | 02 | 02 | 01 | --- | 01 | 07 | 12 |
| 05 | ಅರ್ಥಶಾಸ್ತ್ರ | 01 | 01 | 01 | --- | --- | --- | 03 | 06 |
| 06 | ವ್ಯವಹಾರ ಅಧ್ಯಯನ | --- | --- | --- | --- | --- | --- | 02 | 04 |
| | ಒಟ್ಟು | 06 | 07 | 06 | 03 | --- | 01 | 24 | 40 |

# ಘಟಕವಾರು ಅಂಕ ಹಂಚಿಕೆ

| ಕ್ರ. ಸಂ | ಘಟಕಗಳು | ಜ್ಞಾನ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ್ಯ | | | | | ಒಟ್ಟು ಪ್ರಶ್ನೆ | ಒಟ್ಟು ಅಂಕ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 01 | 02 | 03 | 04 | 05 | 01 | 02 | 03 | 04 | 05 | 01 | 02 | 03 | 04 | 05 | 01 | 02 | 03 | 04 | 05 | | |
| 1 | ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳು | 1(1) | 1(1) | | | | | | | | | | | | | | | | | | | 02 | 02 |
| 2 | ಮಧ್ಯಕಾಲೀನ ಭಾರತ ಮತ್ತು ರಾಜಕೀಯ ಸಂಕ್ರಮಣ | | | | | | | | | 1(3) | | | | | | | | | | | | 01 | 03 |
| 3 | ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು | | 1(1) | | | | | | | | | | | 1(2) | | | | | | | | 01 | 02 |
| 4 | ವಿಜಯನಗರ ಮತ್ತು ಬಹಮನಿ ರಾಜ್ಯ | | | | | | | | | | 1(4) | | | | | | | | | | | 01 | 04 |
| 5 | ನಮ್ಮ ಸಂವಿಧಾನ | 1(1) | | | | | | | | 1(3) | | | | | | | | | | | | 01 | 01 |
| 6 | ಕೇಂದ್ರ ಸರ್ಕಾರ | 1(1) | | | | | | | | | | | 1(1) | | | | | | | | | 02 | 02 |
| 7 | ರಾಜ್ಯ ಸರ್ಕಾರ | | | | | | | | 1(2) | | | | | | | | | | | | | 01 | 02 |
| 8 | ಕುಟುಂಬ | | | | | | | | 1(2) | | | | 1(1) | | | | | | | | | 02 | 03 |
| 9 | ಸಾಮಾಜೀಕರಣ | | | | | | 1(1) | 1(1) | | | | | | | 1(3) | | | | | | | 02 | 02 |
| 10 | ನಮ್ಮ ರಾಜ್ಯ–ಕರ್ನಾಟಕ | | | 1(2) | | | | | | | | | | | | | | | | | | 01 | 02 |
| 11 | ಪ್ರಾಕೃತಿಕ ವಿಭಾಗಗಳು | | 1(1) | | | | | | | | | | | | | | 1(2)* | | | | | 02 | 03 |
| 12 | ಕರ್ನಾಟಕದ ವಾಯುಗುಣ | 1(1) | | | | | | | | | | | 1(1) | | | | | | | | | 02 | 02 |
| 13 | ಕರ್ನಾಟಕದ ಜಲಸಂಪನ್ಮೂಲ | | | | | | | | | | | | | 1(2) | | | | | | | | 01 | 02 |
| 14 | ಕರ್ನಾಟಕದ ಭೂ ಸಂಪತ್ತು | | | | | | | | | | | | | | 1(3) | | | | | | | 01 | 03 |
| 15 | ನೈಸರ್ಗಿಕ ಸಂಪನ್ಮೂಲಗಳು | 1(1) | | | 1(3) | | | 1(1) | | | | | | | | | | | | | | 02 | 02 |
| 16 | ಭಾರತದ ಮಾನವ ಸಂಪನ್ಮೂಲ | | | | | | | | 1(2) | | | | | | | | | | | | | 01 | 02 |
| 17 | ವ್ಯವಹಾರ ನಿರ್ವಹಣೆ | | | | 1(3) | | | | | | | | | | | | | | | | | 01 | 03 |
| | | 5(5) | 2(2) | 1(2) | 1(3) | | 1(1) | 2(2) | 3(6) | 1(3) | 1(4) | | 3(3) | 2(4) | 1(3) | | 1(2) | | | | | 24 | 40 |


# ಪ್ರಶ್ನೆ ಪತ್ರಿಕೆ ವಿಶ್ಲೇಷಣೆ

| ಪ್ರಶ್ನೆ ಸಂಖ್ಯೆ | ಘಟಕ | ಉದ್ದೇಶ | ನಿರೀಕ್ಷಿತ ಫಲ | ಪ್ರಶ್ನೆ ವಿಧ | ಅಂಕ | ಕಾಲ | ಪ್ರಶ್ನೆಯ ಕ್ಲಿಷ್ಟತೆ |
|---|---|---|---|---|---|---|---|
| 1 | ನೈಸರ್ಗಿಕ ಸಂಪನ್ಮೂಲಗಳು | ಜ್ಞಾನ | ಗುರುತಿಸುವನು | ಬಹು ಆಯ್ಕೆ | 1 | 2ನಿ | ಸುಲಭ |
| 2 | ಸಾಮಾಜೀಕರಣ | ತಿಳುವಳಿಕೆ | ಅರ್ಥೈಸುವನು | ಬಹು ಆಯ್ಕೆ | 1 | 2ನಿ | ಕಠಿಣ |
| 3 | ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳು | ಜ್ಞಾನ | ಸ್ಮರಿಸುವನು | ಬಹು ಆಯ್ಕೆ | 1 | 2ನಿ | ಸುಲಭ |
| 4 | ನಮ್ಮ ಸಂವಿಧಾನ | ಜ್ಞಾನ | ಸ್ಮರಿಸುವನು | ಬಹು ಆಯ್ಕೆ | 1 | 2ನಿ | ಸುಲಭ |
| 5 | ಕೇಂದ್ರ ಸರ್ಕಾರ | ಜ್ಞಾನ | ಸ್ಮರಿಸುವನು | ಬಹು ಆಯ್ಕೆ | 1 | 2ನಿ | ಸುಲಭ |
| 6 | ಕರ್ನಾಟಕದ ವಾಯುಗುಣ | ಜ್ಞಾನ | ಸ್ಮರಿಸುವನು | ಬಹು ಆಯ್ಕೆ | 1 | 2ನಿ | ಸಾಮಾನ್ಯ |
| 7 | ಕುಟುಂಬ | ಅನ್ವಯ | ಹೋಲಿಸಿ ಹೇಳುವನು | ಕಿರು ಉತ್ತರ | 1 | 2ನಿ | ಸುಲಭ |
| 8 | ಕರ್ನಾಟಕದ ವಾಯುಗುಣ | ಅನ್ವಯ | ಕಾರಣ ನೀಡುವನು | ಕಿರು ಉತ್ತರ | 1 | 2ನಿ | ಸಾಮಾನ್ಯ |
| 9 | ಕೇಂದ್ರ ಸರ್ಕಾರ | ಅನ್ವಯ | ಅನ್ವಯಿಸುವನು | ಕಿರು ಉತ್ತರ | 1 | 2ನಿ | ಸಾಮಾನ್ಯ |
| 10 | ಸಾಮಾಜೀಕರಣ | ತಿಳುವಳಿಕೆ | ಅರ್ಥೈಸುವನು | ಕಿರು ಉತ್ತರ | 1 | 2ನಿ | ಸಾಮಾನ್ಯ |
| 11 | ನೈಸರ್ಗಿಕ ಸಂಪನ್ಮೂಲಗಳು | ತಿಳುವಳಿಕೆ | ಅರ್ಥೈಸುವನು | ಕಿರು ಉತ್ತರ | 1 | 2ನಿ | ಕಠಿಣ |
| 12 | ಪ್ರಾಕೃತಿಕ ವಿಭಾಗಗಳು | ಜ್ಞಾನ | ಸ್ಮರಿಸುವನು | ಕಿರು ಉತ್ತರ | 1 | 2ನಿ | ಸುಲಭ |
| 13 | ಕ್ರೈಸ್ತ ಧರ್ಮ ಮತ್ತು ಇಸ್ಲಾಂ ಧರ್ಮಗಳು<br>ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು | ಜ್ಞಾನ | ಸ್ಮರಿಸುವನು | ಕಿರು ಉತ್ತರ | 1 | 2ನಿ | ಸುಲಭ |
| 14 | ಮತ ಪ್ರವರ್ತಕರು ಮತ್ತು ಸಮಾಜ ಸುಧಾರಕರು | ಅನ್ವಯ | ಚರ್ಚಿಸುವನು | ಸಂಕ್ಷಿಪ್ತ ಉತ್ತರ | 2 | 5ನಿ | ಸಾಮಾನ್ಯ |
| 15 | ಕುಟುಂಬ | ತಿಳುವಳಿಕೆ | ವಿವರಿಸುವನು | ಸಂಕ್ಷಿಪ್ತ ಉತ್ತರ | 2 | 5ನಿ | ಸಾಮಾನ್ಯ |
| 16 | ಭಾರತದ ಮಾನವ ಸಂಪನ್ಮೂಲ | ತಿಳುವಳಿಕೆ | ವಿವರಿಸುವನು | ಸಂಕ್ಷಿಪ್ತ ಉತ್ತರ | 2 | 5ನಿ | ಕಠಿಣ |
| 17 | ಕರ್ನಾಟಕದ ಜಲಸಂಪನ್ಮೂಲ | ಅನ್ವಯ | ಕಾರಣ ನೀಡುವರು | ಸಂಕ್ಷಿಪ್ತ ಉತ್ತರ | 2 | 5ನಿ | ಕಠಿಣ |
| 18 | ನಮ್ಮ ರಾಜ್ಯ–ಕರ್ನಾಟಕ | ಜ್ಞಾನ | ಹೆಸರಿಸುವರು | ಸಂಕ್ಷಿಪ್ತ ಉತ್ತರ | 2 | 4ನಿ | ಸುಲಭ |
| 19 | ರಾಜ್ಯ ಸರ್ಕಾರ | ತಿಳುವಳಿಕೆ | ವಿವರಿಸುವನು | ಸಂಕ್ಷಿಪ್ತ ಉತ್ತರ | 2 | 4ನಿ | ಸಾಮಾನ್ಯ |
| 20 | ಮಧ್ಯಕಾಲೀನ ಭಾರತ & ರಾಜಕೀಯ ಸಂಕ್ರಮಣ<br>ನಮ್ಮ ಸಂವಿಧಾನ | ತಿಳುವಳಿಕೆ | ವಿವರಿಸುವನು | ದೀರ್ಘ ಉತ್ತರ1 | 3 | 7ನಿ | ಸಾಮಾನ್ಯ |
| 21 | ಕುಟುಂಬ<br>ಕರ್ನಾಟಕದ ಭೂ ಸಂಪತ್ತು | ಅನ್ವಯ | ಕಾರಣ ಕೊಡುವನು | ದೀರ್ಘ ಉತ್ತರ1 | 3 | 6ನಿ | ಸಾಮಾನ್ಯ |
| 22 | ನೈಸರ್ಗಿಕ ಸಂಪನ್ಮೂಲಗಳು<br>ವ್ಯವಹಾರ ನಿರ್ವಹಣೆ | ಜ್ಞಾನ | ಸ್ಮರಿಸುವನು | ದೀರ್ಘ ಉತ್ತರ1 | 3 | 7ನಿ | ಸುಲಭ |
| 23 | ವಿಜಯನಗರ ಮತ್ತು ಬಹಮನಿ ರಾಜ್ಯ | ತಿಳುವಳಿಕೆ | ವಿವರಿಸುವನು | ದೀರ್ಘ ಉತ್ತರ2 | 4 | 10ನಿ | ಕಠಿಣ |
| 24 | ಪ್ರಾಕೃತಿಕ ವಿಭಾಗಗಳು | ಕೌಶಲ | ರಚಿಸುವನು<br>ಗುರುತಿಸುವನು | ನಕ್ಷೆ ರಚನೆ | 2 | 6ನಿ | ಸಾಮಾನ್ಯ |
| | | | | | 40 | 90ನಿ | |

# ಮಾದರಿ ಉತ್ತರ

| | |
|---|---|
| 1) | ಡಿ) ಸೌರಶಕ್ತಿ |
| 2) | ಎ) ಕುಟುಂಬದಲ್ಲಿ |
| 3) | ಎ) ಬೈಬಲ್ |
| 4) | ಬಿ) ಅಂಬೇಡ್ಕರ್ |
| 5) | ಎ) 25ವರ್ಷ |
| 6) | ಡಿ) ಚಳಿಗಾಲ |
| 7) | ಅವಿಭಕ್ತ/ವಿಭಕ್ತ |
| 8) | ಅತಿಹೆಚ್ಚು ಶ್ರೀಗಂಧದ ಮರಗಳನ್ನು ಹೊಂದಿರುವುದರಿಂದ |
| 9) | ರಾಮನಾಥ್ ಕೋವಿಂದ್ |
| 10) | ಸಾಮಾಜಿಕ ವರ್ತನೆಗಳನ್ನು ಅಳವಡಿಸಿಕೊಂಡು ಸಮಾಜ ಜೀವಿಯಾಗಿ ಮನುಷ್ಯರು ರೂಪಾಂತರಗೊಳ್ಳುತ್ತಾರೆ. ಇದನ್ನೇ ಸಾಮಾಜೀಕರಣ ಎಂದು ಕರೆಯುತ್ತಾರೆ. |
| 11) | ಮಾನವ ಜನಾಂಗ ಪೃಥ್ವಿಯ ಪರಿಸರದ ಮೇಲೆ ಹಾಕುತ್ತಿರುವ ಒಟ್ಟಾರೆ ಒತ್ತಡದ ಪ್ರಮಾಣವನ್ನು ಅಳೆಯುವ ಸಾಧನವೇ ಜೀವ ಪರಿಸರದ ಹೆಜ್ಜೆ ಗುರುತು. |
| 12) | ಸಹ್ಯಾದ್ರಿ ಬೆಟ್ಟಗಳು |
| 13) | ಬೆತ್ಲ ಹ್ಯಾಂ/ಕೇರಳದ ಕಾಲಡಿ |
| 14) | ಪ್ರತಿಯೊಬ್ಬರೂ ದುಡಿದು ತಿನ್ನಬೇಕು ಎನ್ನುವ ಸ್ವಾವಲಂಬನೆ ತತ್ವವನ್ನು ಪ್ರತಿಪಾದಿಸಿದ ಬಸವೇಶ್ವರರು ವೃತ್ತಿಯಲ್ಲಿ ಹಿರಿದು ಕಿರಿದು ಎಂಬುದಿಲ್ಲ ಎಂದು ಸಾರಿದರು. ತಮ್ಮ ಕಾಯಕ ತತ್ವದ ಮುಖಾಂತರ ಜನರಲ್ಲಿ ದುಡಿಮೆ ಸಂಸ್ಕೃತಿಯನ್ನು ಬೆಳೆಸಿದರು. |
| 15) | ಗಾತ್ರದಲ್ಲಿ ದೊಡ್ಡದು<br>ಸಹಕಾರ ಸಹಭಾಗಿತ್ವ<br>ವಾಸಸ್ಥಾನ ಮತ್ತು ಅಡುಗೆ ಮನೆ<br>ಧರ್ಮ<br>ಅಧಿಕಾರ ಸಂರಚನೆ |
| 16) | ಆರೋಗ್ಯ ಸೇವೆ<br>ಶಿಕ್ಷಣ<br>ಮೂಲಭೂತ ಸೌಕರ್ಯ<br>ವೃತ್ತಿ ಮತ್ತು ಕೌಶಲ್ಯ ಆಧಾರಿತ ಶಿಕ್ಷಣ |
| 17) | ಭಾರತದಲ್ಲಿ ನದಿಗಳು ಹಲವಾರು ರಾಜ್ಯಗಳಲ್ಲಿ ಹರಿಯುತ್ತವೆ. ಉದಾ: ಕಾವೇರಿ ನದಿಯು ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪಾಂಡಿಚೇರಿ ರಾಜ್ಯಗಳಲ್ಲಿ ಹರಿಯುತ್ತದೆ. ಕೃಷ್ಣಾ ನದಿಯು ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶಗಳಲ್ಲಿ ಹರಿಯುತ್ತದೆ. ಈ ರಾಜ್ಯಗಳು ಜಲವಿವಾದಗಳಿದ್ದಾಗ್ಯೂ ನದಿಯ ನೀರನ್ನು ಕೃಷಿ ಕ್ಷೇತ್ರಕ್ಕೆ, ಕೈಗಾರಿಕಾ ಕ್ಷೇತ್ರಕ್ಕೆ ಮತ್ತು ಕುಡಿಯುವ ನೀರಿನ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. |
| 18) | ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳು |
| 19) | ಈ ಸದಸ್ಯರು 5 ಕ್ಷೇತ್ರಗಳನ್ನು ಪ್ರತಿನಿಧಿಸುತ್ತಾರೆ. ವಿಧಾನಸಭಾ ಸದಸ್ಯರಿಂದ, ಸ್ಥಳೀಯ ಸಂಸ್ಥೆಗಳಿಂದ, ಪದವೀಧರ |

| | | |
|---|---|---|
| | ಕ್ಷೇತ್ರದಿಂದ, ಶಿಕ್ಷಕರ ಕ್ಷೇತ್ರದಿಂದ ಚುನಾಯಿಸಲ್ಪಟ್ಟರೆ, ಕಲೆ, ಸಾಹಿತ್ಯ, ಶಿಕ್ಷಣ, ಸಮಾಜ ಸೇವೆ, ವಿಜ್ಞಾನ ಮತ್ತು ಸಹಕಾರ ಚಳವಳಿ ಕ್ಷೇತ್ರಗಳಲ್ಲಿನ ಸೇವೆಯನ್ನು ಪರಿಗಣಿಸಿ ರಾಜ್ಯಪಾಲರು ನಾಮಕರಣ ಮಾಡುತ್ತಾರೆ. | |
| 20) | ಜಯದೇವನ 'ಗೀತಗೋವಿಂದ', ಭಾರವಿಯ 'ಕಿರಾತಾರ್ಜುನೀಯ', ಭರ್ತೃಹರಿಯ 'ರಾವಣ ವಧಾ', ಮಹೇಂದ್ರಪಾಲನ 'ಕಾವ್ಯ ಮೀಮಾಂಸೆ' ಕಾವ್ಯಗಳು ಇವರ ಕಾಲದಲ್ಲಿ ರಚನೆಯಾದವು. ನಾಟಕಗಳಾದ ರಾಜಶೇಖರ ರಚಿಸಿದ 'ಬಾಲ ರಾಮಾಯಣ' ಮತ್ತು 'ಕರ್ಪೂರ ಮಂಜರಿ', ಭವಭೂತಿ ರಚಿಸಿದ 'ಮಹಾವೀರಚರಿತ', ಹಾಗೂ 'ಉತ್ತರರಾಮಚರಿತ', ಐತಿಹಾಸಿಕ ಕೃತಿಗಳಾದ ಕಲ್ಹಣನ 'ರಾಜ ತರಂಗಿಣಿ', ಜಯನಿಕನ 'ಪೃಥ್ವಿರಾಜ ವಿಜಯ' ಮತ್ತು ಹೇಮಚಂದ್ರನ 'ಕುಮಾರಪಾಲಚರಿತ' ಮಹತ್ವದ್ದಾಗಿವೆ. ರಜಪೂತ ಅರಸರ ಜೀವನ ಕೃತಿಗಳಾದ 'ಪೃಥ್ವಿರಾಜ ರಾಸೋ'ವನ್ನು ಚಂದ್ ಬರದಾಯಿ ಮತ್ತು 'ಭೋಜ ಪ್ರಬಂಧ'ವನ್ನು ಬಲ್ಲಾಳ ಎಂಬುವರು ರಚಿಸಿದರು. | ಲಿಖಿತ ಮತ್ತು ಬೃಹತ್ ಸಂವಿಧಾನ<br>ಭಾಗಶಃ ನಮ್ಯ ಮತ್ತು ಭಾಗಶಃ ಅನಮ್ಯ ಸಂವಿಧಾನ<br>ಸಂಸದೀಯ ಸರ್ಕಾರ ಪದ್ಧತಿ<br>ಗಣತಂತ್ರ ವ್ಯವಸ್ಥೆ<br>ಸಂಯುಕ್ತ ಪದ್ಧತಿ<br>ಮೂಲಭೂತ ಹಕ್ಕುಗಳು<br>ಮೂಲಭೂತ ಕರ್ತವ್ಯಗಳು<br>ರಾಜ್ಯ ನಿರ್ದೇಶಕ ತತ್ವಗಳು<br>ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ ವ್ಯವಸ್ಥೆ |
| 21) | ಮಾನವ ಜೀವಿಯನ್ನು ಸಾಮಾಜಿಕ ಜೀವಿಯನ್ನಾಗಿಸುತ್ತದೆ.<br>ವಿವಿಧ ಕೌಶಲ್ಯಗಳ ಕಲಿಕೆ ಮತ್ತು ಅಳವಡಿಕೆಗೆ ಅವಕಾಶ ಒದಗಿಸುತ್ತದೆ.<br>ಸಾಮಾಜಿಕ ಸಂಬಂಧಗಳನ್ನು ಬೆಳೆಸುತ್ತದೆ ಮತ್ತು ಸಾಮಾಜಿಕ ವ್ಯವಸ್ಥೆಗೆ ಬದ್ಧತೆ ಮತ್ತು ಬೆಂಬಲವನ್ನು ನೀಡುತ್ತದೆ.<br>ವ್ಯಕ್ತಿತ್ವದ ಬೆಳವಣಿಗೆಗೆ ಸಹಾಯ ಮಾಡುತ್ತದೆ.<br>ಪರಂಪರೆಯ ಮುಂದುವರಿಕೆಗೆ ಸಹಕಾರಿಯಾಗಿದೆ. | ಇದು ಮುಖ್ಯ ಜೀವನಾಧಾರಿತ ವೃತ್ತಿ. ನಮ್ಮ ರಾಜ್ಯದ ಆರ್ಥಿಕತೆಯ ಬೆನ್ನೆಲುಬು. ಆರ್ಥಿಕಾಭಿವೃದ್ಧಿಯು ವ್ಯವಸಾಯವನ್ನಾಧರಿಸಿದೆ. ಜೀವನ ನಡೆಸಲು ಉದ್ಯೋಗವನ್ನು ನೀಡಿದೆ. ಜನರಿಗೆ ಆಹಾರ, ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತದೆ. ರಾಜ್ಯದ ಆದಾಯದ ಮೂಲವಾಗಿದೆ. ವಿದೇಶಿ ವಿನಿಮಯ ಗಳಿಸಿಕೊಡುತ್ತದೆ. ಕಾಫಿ, ರೇಷ್ಮೆ, ಸಾಂಬಾರ ಪದಾರ್ಥಗಳು, ತಂಬಾಕು, ಹತ್ತಿ ಮುಂತಾದುವು ರಫ್ತಾಗುವ ಕೃಷಿ ಉತ್ಪನ್ನಗಳು. ತೃತೀಯ ವೃತ್ತಿಗಳಾದ ಸಾರಿಗೆ, ಬ್ಯಾಂಕಿಂಗ್ ವ್ಯವಸ್ಥೆ, ವಿಮೆ ಇತ್ಯಾದಿಗಳ ಪ್ರಗತಿಗೂ ಇದು ಪೂರಕವಾಗುತ್ತದೆ. |
| 22) | ಮಿತಿಮೀರಿದ ಜನಸಂಖ್ಯೆ<br>ಹೆಚ್ಚುತ್ತಿರುವ ಔದ್ಯೋಗೀಕರಣ<br>ವಿಸ್ತರಣೆಯಾಗುತ್ತಿರುವ ನಗರ ಪ್ರದೇಶಗಳು<br>ವಾಯು ಮಾಲಿನ್ಯ<br>ಜಲಮಾಲಿನ್ಯ ಮತ್ತು ಭೂ ಸವಕಳಿ | ಕಾರ್ಯವಿಭಜನೆ<br>ಏಕರೂಪದ ಆಜ್ಞೆ<br>ಏಕರೂಪದ ಆದೇಶ<br>ಉದ್ಯೋಗಿಗಳ ವೇತನ<br>ಹಂತಸರಪಳಿ<br>ಸಮಾನತೆ<br>ನೇತೃತ್ವ:<br>ಒಗ್ಗಟ್ಟಿನಲ್ಲಿ ಬಲ |
| 23) | ವಿಜಯನಗರದ ಅರಸರು ಚಾಲುಕ್ಯ, ಚೋಳ ಮತ್ತು ಹೊಯ್ಸಳ ವಾಸ್ತುಶೈಲಿಯ ಮಾದರಿಗಳನ್ನು ಮುಂದುವರೆಸಿದರು. | |

<table>
<tr><td></td><td colspan="2">ಇವರ ಶೈಲಿಯ ಪ್ರಧಾನ ಲಕ್ಷಣವೆಂದರೆ ಹಲವಾರು ಕಂಭಗಳ ಸಾಲುಗಳಿಂದ ಕೂಡಿದ ವಿಶಾಲ ಸಭಾ ಮಂಟಪ ಅಥವಾ ಕಲ್ಯಾಣ ಮಂಟಪಗಳು.<br>ದೇವಾಲಯಗಳು ಎತ್ತರವಾದ ಗೋಪುರಗಳನ್ನು, (ರಾಯ ಗೋಪುರ) ಹೊಂದಿದ್ದು ಪತ್ರಾಕೃತಿಯ ಕಮಾನುಗಳನ್ನು ಮತ್ತು ಮಂಟಪಗಳನ್ನು ಹೊಂದಿವೆ.<br>ಇವರ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳನ್ನು ಹಂಪೆ, ಶೃಂಗೇರಿ, ತಿರುಪತಿ, ಕಂಚಿ, ಲೇಪಾಕ್ಷಿ, ಕಾರ್ಕಳ, ಮೂಡಬಿದ್ರಿ, ಭಟ್ಕಳ, ಚಿದಂಬರಂ, ಕಾಳಹಸ್ತಿ, ನಂದಿ, ಶ್ರೀಶೈಲ, ಕೋಲಾರ ಮುಂತಾದ ಕಡೆಗಳಲ್ಲಿ ಕಾಣಬಹುದು.<br>ವಿಜಯನಗರದಲ್ಲಿರುವ ಅತ್ಯಂತ ಪ್ರಾಚೀನ ದೇವಾಲಯವೆಂದರೆ ಹಂಪಿಯ ವಿರೂಪಾಕ್ಷ ದೇವಾಲಯ. ವಿಶಾಲವಾದ ಪ್ರಾಂಗಣವನ್ನು ಹೊಂದಿರುವ ಇದು ಸೊಗಸಾದ ಕೆತ್ತನೆಯ ಕಂಬಗಳು, ಅಲಂಕೃತ ಚಾವಣಿಗಳನ್ನು ಹೊಂದಿದೆ.<br>ಹಂಪಿಯಲ್ಲಿರುವ ವಿಜಯ ವಿಠ್ಠಲ ದೇವಾಲಯವು ಶೃಂಗಾರಮಯ ಕಲಾತ್ಮಕ ಕೆಲಸಕ್ಕೆ ಹೆಸರಾಗಿದೆ.<br>ಸಪ್ತಸ್ವರಗಳನ್ನು ಧ್ವನಿಸುವ ಕಂಭಗಳು, ವಿಶಾಲವಾದ ಕಲ್ಯಾಣಮಂಟಪಗಳು, ಕಲ್ಲಿನಲ್ಲಿ ಕೆತ್ತಿದ ರಥ ಈ ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿವೆ.<br>ಕಮಲ್ ಮಹಲ್, ಗಜಶಾಲೆ, ರಾಣಿ ಸ್ನಾನಗೃಹ ಇಂಡೋ–ಮುಸ್ಲಿಂ ಶೈಲಿಯ ಉತ್ತಮ ಕಟ್ಟಡಗಳಾಗಿವೆ. ಲಕ್ಷ್ಮೀನರಸಿಂಹ, ಕಡಲೆಕಾಳು ಗಣೇಶ, ಸಾಸಿವೆಕಾಳು ಗಣೇಶ, ಉದ್ಧಾನ ವೀರಭದ್ರನ ಶಿಲ್ಪಗಳು ಆಕರ್ಷಕವಾಗಿವೆ.<br>ವಿಜಯನಗರದ ಕಾಲದ ಹಂಪಿಯ ಕೋಟೆಯು ಭದ್ರವಾದ 7 ಸುತ್ತಿನಿಂದ ಕೂಡಿತ್ತು. ಪ್ರಸ್ತುತ 4 ಸುತ್ತುಗಳು ಉಳಿದುಕೊಂಡಿವೆ.</td></tr>
<tr><td>24)</td><td></td><td></td></tr>
</table>